ಹಾಕೋಣ, ಮತ್ತೆ ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ ನಡೆಸಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : Ok , ಇನ್ನು ಶ್ರೀ ಎನ್. ಚಲುವರಾಯಸ್ವಾಮಿಯವರು ಇಲ್ಲಿ ಮಾನ್ಯ ಹೆಚ್.ಡಿ.ರೇವಣ್ಣನವರೆ ಕೇಳಿ.

ಆ ವಿಷಯ : ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ ಸಮುದಾಯ ಆಸ್ಪತ್ರೆ ಮತ್ತು ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆ,

ಶ್ರೀ ಹೆಚ್.ಡಿ.ರೇವಣ್ಣ: (ಹೊಳೆನರಸೀಪುರ) ಮಾನ್ಯ ಅಧ್ಯಕ್ಷರೆ , ಒಬ್ಬ ಮಾಜಿ ಪ್ರಧಾನಮಂತ್ರಿಯ ಊರಲ್ಲಿ ಸಮುದಾಯ ಆಸ್ಪತೆ ಇಲ್ಲ. ನನ್ನ ಕ್ಷೇತ್ರದಲ್ಲಿಯೂ ಸಮುದಾಯ ಆಸ್ಪತ್ರೆ ಇಲ್ಲ. ಮತ್ತೆ ಐದು ಜನ ಡಾಕ್ಟರ್‌ಗಳು ಇಲ್ಲ, ಇಲ್ಲಿ ಕಳೆದ ಎರಡು ವರ್ಷಗಳಿಂದ ಡಾಕ್ಟರ್‌ಗಳಿಲ್ಲ. ಈ ರೀತಿ ಆದರೆ ಆಸ್ಪತ್ರೆಯ ಬಾಗಿಲು ಮುಚ್ಚಿ.

ಅಧ್ಯಕ್ಷರು : ಈ ಪರಿಸ್ಥಿತಿ ಇಡೀ ರಾಜ್ಯದಲ್ಲಿದೆ, ನನ್ನ ಕ್ಷೇತ್ರದ್ದು ಕತೆಯನ್ನು ಕೇಳಿದರೆ ಅಷ್ಟೆ, ನಾನು ನನ್ನ ತಾಲ್ಲೂಕಿನ ಬಗ್ಗೆ ಮಂತ್ರಿಗಳಿಗೆ ಹೇಳಿಯೂ ಆಯಿತು, ಪತ್ರವನ್ನು ಬರೆದು ಆಯಿತು, ಏನೂ ಆಗಲಿಲ್ಲ. ಮಾನ್ಯ ಸಚಿವರೇ, ಉತ್ತರ ಹೇಳಿ,

ಶ್ರೀ ಯು.ಟಿ.ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಪಡುವಲಹಿಪ್ಪೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ 4 ತಜ್ಞ ವೈದ್ಯರು ಹಾಗೂ ಒಂದು ದಂತ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ ತಜ್ಞರ ಹುದ್ದೆಗಳು ಖಾಲಿ ಇದೆ.

ಸದರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಈ ಹಿಂದೆ ಸ್ತ್ರೀರೋಗ ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದರು. ಈ ತಜ್ಞರು ಮೇ–2013ರ ವರ್ಗಾವಣೆ ಸಮಯದಲ್ಲಿ ಕೌನ್ಸಿಲಿಂಗ್ ಕಾಯ್ದೆ ಮೇರೆಗೆ ಪತಿ–ಪತ್ನಿ ಪ್ರಕರಣದಡಿ ವರ್ಗಾವಣೆ ಹೊಂದಿರುತ್ತಾರೆ.

ರೋಗಿಗಳ ಹಿತದೃಷ್ಟಿಯಿಂದ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ವಾರಕ್ಕೆ ಮೂರು ದಿನದಂತೆ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಇಬ್ಬರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಚಿಕಿತ್ಸೆ ನೀಡಲು ನಿಯೋಜಿಸಲಾಗಿದೆ.

ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಂದು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆ ಮಂಜೂರಾಗಿದ್ದು, ಸದರಿ ಹುದ್ದೆಯು ಖಾಲಿ ಇರುತ್ತದೆ. ರೋಗಿಗಳ ಹಿತದೃಷ್ಟಿಯಿಂದ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ವಾರಕ್ಕೆ ಮೂರು ದಿನದಂತೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಚಿಕಿತ್ಸೆ ನೀಡಲು ನಿಯೋಜಿಸಲಾಗಿದೆ.

ಹಾಸನ ಜಿಲ್ಲೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಎನ್.ಆರ್.ಹೆಚ್.ಎಂ./ ಕೆ.ಹೆಚ್.ಎಸ್. ಡಿ.ಆರ್.ಪಿ, ಅಡಿಯಲ್ಲಿ ಗೌರವಧನ ಮೇಲೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಅರ್ಜಿ ಅಹ್ವಾನಿಸಿದರೂ ಸಹ ಯಾವ ವೈದ್ಯರು ಮುಂದೆ ಬರುತ್ತಿಲ್ಲ ಹಾಗೂ ಸದರಿ ಹುದ್ದೆಗಳಿಗೆ ನೇರ ಸಂದರ್ಶನದ ಮುಖಾಂತರ ಆಹ್ವಾನಿಸಲಾಗಿದೆ ಆದರೂ ಯಾವುದೇ ವೈದ್ಯರು ಸಂದರ್ಶನಕ್ಕೆ ಹಾಜರಾಗಿರುವುದಿಲ್ಲ. ಒಟ್ಟಾರೆ, ಸರ್ಕಾರಿ ಆಸ್ಪತ್ರೆ ಕೇಂದ್ರಗಳಲ್ಲಿ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿ ಯಾಗಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರೆ, ತಮಗೆ ಹೇಳುವುದೇನೆಂದರೆ ಒಂದು ಸಮಸ್ಯೆ ಕಾಡುತ್ತಿದೆ. ನಾನು ತಮಗೆ ಪತ್ರವನ್ನು ಬರೆದಿದ್ದೇನೆ, ಮತ್ತೆ ಮಾನ್ಯ ಸದಸ್ಯರು ಹೇಳುವಂಥ ವಿಚಾರವನ್ನು ನಾನೇ ಹೇಳುತ್ತಿದ್ದೇನೆ. ಮೆಡಿಕಲ್ ಕಾಲೇಜುಗಳಲ್ಲಿ ಡಾಕ್ಟರ್‌ಗಳಿಗೆ ಏನು ಸಂಬಳವನ್ನು ಕೊಡುತ್ತಿದ್ದೀರಿ, ಅದೇ ಸಂಬಳವನ್ನು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ಡಾಕ್ಟರ್‌ಗಳಿಗೆ ಕೊಡುವ ಶಿರ್ಮಾನವನ್ನು ಮಾಡಿ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯನ್ನು ಪರಿಗಣಿಸಿ, ನಾವು ಈಗಾಗಲೇ ನಮ್ಮ Health Department ವೈದ್ಯರುಗಳಿಗೆ Medical Colleges ಕೊಡುವ ವೇತನ ಕೊಡುವ ಶಿಫಾರಸ್ಸು ಅನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ.

ಅಧ್ಯಕ್ಷರು : ಮಾನ್ಯ ಕಾನೂನು ಸಚಿವರೆ, ಇದನ್ನು ಬೇಗ ಮಾಡಿ, ದಯವಿಟ್ಟು equal pay ಮಾಡಿ.

ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ವಾರಕ್ಕೆ ಮೂರು ದಿನ ಕರ್ತವ್ಯಕ್ಕೆ ನಿಯೋಜಿಸಲಾಗಿದೆಯೆಂದು ತಿಳಿಸಿದ್ದಾರೆ. ಅಲ್ಲಿ ಪಡುವಲಹಿಪ್ಪೆ ಮತ್ತು ಹರದನಹಳ್ಳಿಯಲ್ಲೂ ಆಸ್ಪತ್ರೆಗಳನ್ನು ಬಾಗಿಲು ಹಾಕಿದ್ದಾರೆ. ಅಲ್ಲಿ ವಾರಕ್ಕೆ ವೈದ್ಯಾಧಿಕಾರಿಗಳು 3 ದಿವಸವಲ್ಲ, ಒಂದು ದಿವಸವೂ ಹೋಗುತ್ತಿಲ್ಲ.

ಅಧ್ಯಕ್ಷರು :ಒಂದೊಂದು ದಿನ ಒಬ್ಬರೂ ಬರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಮಡಿಕಲ್ ಕಾಲೇಜ್‌ಗಳಲ್ಲಿ ಏನು ಸಂಬಳವನ್ನು ಕೊಡುತ್ತಿದ್ದಾರೆ, ಆ ರೀತಿ ಇಲ್ಲೂ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೆ, ಆ ರೀತಿ ಮಾಡಿ.

ಶ್ರೀ ಯು.ಟಿ.ಖಾದರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರ ಕ್ಷೇತ್ರದ ಪರಿಸ್ಥಿತಿ ನಮ್ಮ ಕ್ಷೇತ್ರಕ್ಕಿಂತ ಬಹಳ ಚೆನ್ನಾಗಿದೆ. ಅವರ ಒಂದೇ ಕ್ಷೇತ್ರದಲ್ಲಿ 22 PHC ಇದೆ, ಅದರಲ್ಲಿ 21ರಲ್ಲಿ ಡಾಕ್ಟರ್‌ಗಳಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ : ಆ 22 PHC ಗಳಲ್ಲೂ ರೋಗಿಗಳಿಲ್ಲ ಅಲ್ಲಿಗೆ ಯಾರಾದರೂ ರೋಗಿಗಳನ್ನು ಕಳುಹಿಸಿಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಚಿವರೆ, ಈ ರೀತಿ ಸುಳ್ಳು statement ಕೊಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಆ ರೀತಿ ಹೇಳಬಾರದು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ದುದ್ದಾದಲ್ಲಿ 5 post ನಲ್ಲಿ 5 ಖಾಲಿ ಇದೆ, ತಾವು 21 PHC ಗಳಲ್ಲಿ ಡಾಕ್ಟರ್‌ಗಳಿದ್ದಾರೆಂದು ಹೇಳಿದ್ದೀರಿ, ಅದನ್ನು ವಾಪಸ್ಸು ತೆಗೆದುಕೊಳ್ಳಿ. ಮಾನ್ಯ ಮಂತ್ರಿಯವರು 21 PHC ಗಳಿವೆಯೆಂದು ಹೇಳುತ್ತಾರೆ, ನನ್ನ ಕ್ಷೇತ್ರ ಹಾಸನದಿಂದ ಹಿಡಿದು ಚನ್ನರಾಯ ಪಟ್ಟಣ ತಾಲ್ಲೂಕು, ಹೊಳೆನರಸೀಪುರ ತಾಲ್ಲೂಕು ಬರುತ್ತದೆ. ನಮಗೆ ಮೂರು ತಾಲ್ಲೂಕುಗಳು, ಬರುತ್ತವೆ. ಇದನ್ನು Comment ಮಾಡುವುದಕ್ಕೆ ಹೋಗಬೇಡಿ. ಇನ್ನು 121 ಹುದ್ದೆಗಳು ಖಾಲಿ ಇವೆ.

(ಗೊಂದಲ)

ಶ್ರೀ ಸಿ.ಎನ್.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಈ ಜಿಲ್ಲೆಯಲ್ಲಿ 76 ಹುದ್ದೆಗಳು ಖಾಲಿ ಇವೆಯೆಂಬುದು ತಮ್ಮ ಗಮನದಲ್ಲಿರಲಿ ...

ಶ್ರೀ ಯು.ಟಿ.ಖಾದರ್:– ಮಾನ್ಯ ಅಧ್ಯಕ್ಷರೆ, ತಮ್ಮ ಪರಿಸ್ಥಿತಿ ನನಗೆ ಅರ್ಥವಾಗುತ್ತದೆ. ಆ ಕ್ಷೇತ್ರದಲ್ಲಿ PHC 22 ಇದೆ, CHC 6 ಇವರ ಕ್ಷೇತ್ರದಲ್ಲಿದೆ, ಸಂತೋಷ, ಅದಕ್ಕೆ ನಾವು ಅಭಿನಂದಿಸುತ್ತೇವೆ. ಅದರಲ್ಲಿ 21 PHC ಗೆ ಡಾಕ್ಟರ್‌ಗಳಿದ್ದಾರೆ.

ಅಧ್ಯಕ್ಷರು : ಸಾಕು, ಇನ್ನು ಮತ್ತು ಹೆಚ್.ಆರ್.ಆಲಗೂರು (ರಾಜು)ರವರೇ ಕೇಳಿ

ವಿಷಯ : ಟಿಪ್ಪುಸುಲ್ತಾನರ ಜನ್ಮ ದಿನೋತ್ಸವವನ್ನು ಸರ್ಕಾರಿ ರಜೆಯನ್ನಾಗಿ ಘೋಷಣೆ ಮಾಡುವ ಬಗ್ಗೆ

ಶ್ರೀ ರಾಜು.ಅಲಗೂರ (ನಾಗಾಠಾಣ) : ಮಾನ್ಯ ಅಧ್ಯಕ್ಷರೆ, ಟಿಪ್ಪು ಸುಲ್ತಾನರ ಜನ್ಮ ದಿನೋತ್ಸವವನ್ನು ಸರ್ಕಾರಿ ರಜೆಯನ್ನಾಗಿ ಮಾಡಿ ಸರ್ಕಾರದ